

ಎಚ್ಚರವಾದಾಗ ವಿಮಾನದ ಕಿಟಕಿಯಿಂದ ಸಿಟಿಯ ಒಂದು ಬದಿಯಲ್ಲಿ ದಟ್ಟ ನೀಲಿಯ ಸಮುದ್ರ ಕಂಡಿತು. ಏರ್ ಹೋಸ್ಟೆಸ್ ನಮ್ರವಾಗಿ "**Welcome to the island**" ಎಂದು ಮಂಪರಿನಲ್ಲಿದ್ದ ಪ್ರಯಾಣಿಕರಿಗೆ ಹೇಳಿದಳು. ಅದು ನನ್ನ ಚೊಚ್ಚಲ ವಿದೇಶೀ ಪ್ರಯಾಣ.

ಟೌನ್‌ಹಾಲ್ ಸ್ಟೇಷನ್ನಿನಲ್ಲಿ ಇಳಿದು ಹೊರ ಬರುತ್ತಿದ್ದಂತೆಯೇ ಸಾಲಾಗಿ ಕಾಫಿ ಶಾಪ್‌ಗಳು ಕಾಣುತ್ತಿದ್ದವು. ಅದರಲ್ಲೊಂದು ಶಾಪಿನಲ್ಲಿ ಕೆಲಸ ಮಾಡುತ್ತಿದ್ದ ಹುಡುಗಿಯ ಸುಡು ಸುಡು ಕೆಂಬಣ್ಣದ ಕೂದಲನ್ನು ನೋಡಿ ನಿಂತೆ. ನಿಂತ ಕೂಡಲೇ ಆರ್ಡರ್ ಮಾಡಬೇಕು. ಇಲ್ಲದಿದ್ದರೆ ಹಿಂದೆ ನಿಂತವರಿಗೆ ಜಾಗ ಬಿಟ್ಟುಬಿಡಬೇಕು. ಕೆಂಪು ಕೂದಲಿನ ಹುಡುಗಿ ಆರ್ಡರ್ ತೆಗೆದುಕೊಂಡು ಒಳಗಿದ್ದವನಿಗೆ ಕೂಗಿ ಹೇಳುತ್ತಿದ್ದಳು.

ಟರ್ಕಿಷ್ ಬ್ರೆಡ್ ವಿತ್ ಆವೋಕಾಡೋ, ರೈಸಿನ್ ಟೋಸ್ಟ್, ಬೇಕ್ಡ್ ಬೀನ್ಸ್ ಆನ್ ಟೋಸ್ಟ್, ಕ್ಯಾಪುಚಿನೋ ವಿತ್ ವನ್ ಶುಗರ್, ಬ್ರೌನ್ ಬ್ರೆಡ್ ವಿತ್ ಪೀನಟ್ ಬಟರ್ ಹೀಗೆ ಒಬ್ಬರಾದ ಮೇಲೊಬ್ಬರು ಆರ್ಡರ್ ಮಾಡಿ ಪಕ್ಕಕ್ಕೆ ನಿಂತು ಕಾಯುತ್ತಾ ತಮ್ಮ ಮೊಬೈಲ್ ಫೋನಿನಲ್ಲಿ ಮಗ್ನರಾಗುತ್ತಿದ್ದರು. ಏನು ಹೇಳಬೇಕೆಂದು ಗೊತ್ತಾಗದೆ ಅವಳನ್ನೇ ನೋಡುತ್ತಾ ನಿಂತು, ನಂತರ ಒಂದು ಕ್ಯಾಪುಚಿನೋ ಹೇಳಿ ಪಕ್ಕದಲ್ಲಿ ನಿಂತೆ. ಬಹಳ ಹೊತ್ತಿನ ನಂತರ ಆರ್ಡರ್ ಹೇಳಿದಾಗ ನಕ್ಕು "**It took you a while to decide!**" ಎಂದಳು. ಬಂದವರನೆಲ್ಲಾ "**How are you today?** ಎಂದು ವಿಚಾರಿಸುತ್ತಿದ್ದಳು.